**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ43/2021 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **12.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ **ಕೆ.ಎಸ್.ಎಸ್** ವಕೀಲರಿಂದಃ

ನಾನು ದಾವಾ ಆಸ್ತಿಯು ನನ್ನ ತಂದೆ ಆಸ್ತಿಯಾಗಿದ್ದು, ಅದು ನನಗೆ ಬರಬೇಕೆಂದು ಪರಿಹಾರ ಕೋರಿ ಈ ದಾವೆಯನ್ನು ಹಾಕಿರುತ್ತೇನೆ. ನಾನು ಈ ದಾವೆಯನ್ನು ಆಸ್ತಿ ವಿಭಾಗದ ಪರಿಹಾರದ ಕೋರಿ ಸಲ್ಲಿಸಿರುತ್ತೇನೆ. ನಾನು ಈ ದಾವೆಯನ್ನು ಒಂದು ಆಸ್ತಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ, ಸದರಿ ಆಸ್ತಿಯ ವಿವರ ಅಂದರೆ ಸರ್ವೇ ನಂಬರ ಹಾಗೂ ಚೆಕ್ಕುಬಂಧಿಗಳು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ಹೆಸರು ಚನ್ನಯ್ಯ ಎಂದು ಇರುತ್ತದೆ.

ಈ ದಾವೆಯನ್ನು ಮಲ್ಲೇಶರವರ ವಿರುದ್ಧ ಸಲ್ಲಿಸಿರುತ್ತೇನೆ. ಮಲ್ಲೇಶರವರನ್ನು ಚಿಕ್ಕಚನ್ನಯ್ಯ ಎಂದು ಸಹ ಕರೆಯುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಯ ತಂದೆ ಹೆಸರು ಚಿಕ್ಕ ಚನ್ನಯ್ಯ ಎಂದು ಇರುತ್ತದೆ. ಸದರಿಯವರಿಗೆ ಇಬ್ಬರು ಮಕ್ಕಳು ಇರುತ್ತಾರೆ, ಸದರಿಯವರಲ್ಲಿ ಒಬ್ಬರ ಹೆಸರು ಚನ್ನಯ್ಯ ಎಂದು ಇದ್ದು, ಸದರಿಯವರು ನನ್ನ ತಂದೆ ಆಗಿರುತ್ತಾರೆ, ಮತ್ತೊಬ್ಬರ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯ ಹೆಸರು ಸಣ್ಣಮ್ಮ ಎಂದು ಇರುತ್ತದೆ. ನನ್ನ ತಂದೆ-ತಾಯಿಗೆ ಇಬ್ಬರು ಮಕ್ಕಳು ಇದ್ದು, ಒಬ್ಬ ಗಂಡು ಮಗ ಸದರಿಯವರು ನನ್ನ ಅಣ್ಣ ಅಗಿದ್ದು, ಸದರಿಯವರ ಹೆಸರು ಸಿದ್ದಯ್ಯ ಎಂದು ಇದ್ದು ಮತ್ತು ನಾನು ಆಗಿರುತ್ತೇನೆ.

ನಿಂಗಮ್ಮ, ಮಹದೇವಮ್ಮ ಮತ್ತು ಸಿದ್ದಯ್ಯರವರು ಕುಟುಂಬ ಸದಸ್ಯರು ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಹೆಸರು ಮಾದಯ್ಯ ಅಲಿಯಾಸ ಮೂಗಯ್ಯ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಚಿಕ್ಕಪ್ಪನ ಹೆಂಡತಿಯ ಹೆಸರು ಬೋರಮ್ಮ ಎಂದರೆ ಸರಿ. ಸದರಿಯವರಿಗೆ ಇಬ್ಬರು ಮಕ್ಕಳು ಇದ್ದು, ಸದರಿಯವರ ಹೆಸರು ಮಲ್ಲೇಶ ಅಲಿಯಾಸ್ ಚಿಕ್ಕಚನ್ನಯ್ಯ ಮತ್ತು ಕಾಳಿ ಚನ್ನಯ್ಯ ಎಂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಸದರಿ ಕಾಳಿ ಚನ್ನಯ್ಯ ಈಗ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಈ ವಾದಪತ್ರದ ಶೀರ್ಷಿಕೆಯಲ್ಲಿ ತಿಳಿಸಿರುವ ಪ್ರತಿವಾದಿಯ ವಿವರಗಳನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ವಾದ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿರುವುದಿಲ್ಲ. ವಾದ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ವಾದಪತ್ರದ ಅಂಶಗಳನ್ನು ನನ್ನ ಅಣ್ಣ ಹೇಳಿ ಬರೆಸಿರುತ್ತಾರೆ. ವಾದಪತ್ರದ ಅಂಶಗಳು ನನಗೆ ವೈಯುಕ್ತಿಕವಾಗಿ ಗೊತ್ತಿರುವುದಿಲ್ಲ.

ನನ್ನ ಅಣ್ಣ ಇದೇ ನ್ಯಾಯಾಲಯದಲ್ಲಿ O.S No.21/2021 ರಂತೆ ಒಂದು ದಾವೆಯನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯನ್ನು ಆಸ್ತಿಗಳ ವಿಭಾಗಕ್ಕಾಗಿ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿರುವ ಪ್ರತಿವಾದಿ ನನ್ನ ಅಣ್ಣನ ಮಗ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು ಹಾಗೂ ಪ್ರತಿವಾದಿಯನ್ನು 3 ನೇ ಹಾಗೂ 4 ನೇ ಪ್ರತಿವಾದಿಯನ್ನಾಗಿ ಮಾಡಿರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಗಳು ನನ್ನ ತಂದೆಗೆ ಗೇಣಿಯಾಗಿ ಮಂಜೂರಾದ ಆಸ್ತಿಗಳಾಗಿರುತ್ತವೆ. ಒಟ್ಟು ಎಷ್ಟು ಆಸ್ತಿಗಳು ನಿಮ್ಮ ತಂದೆಗೆ ಗೇಣಿಯಾಗಿ ಮಂಜೂರಾಗಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು 1 ಎಕರೆ 20 ಗುಂಟೆ ಮಂಜೂರು ಆಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯು ನನ್ನ ತಂದೆ ಹಾಗೂ ತಾಯಿಯ ವಿರುದ್ಧ O.S No.3/1995 ರಂತೆ ವಿಭಾಗಕ್ಕಾಗಿ ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯು ಪ್ರತಿವಾದಿಯ ಪರವಾಗಿ ದಿನಾಂಕ 27.09.1997 ರಂದು ಡಿಕ್ರಿಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯ ಪರವಾಗಿ ಸರ್ವೇ ನಂ.99/3 ಮತ್ತು 100 ರಲ್ಲಿ ಒಟ್ಟು 1 ಎಕರೆ 20 ಗುಂಟೆ ಜಮೀನುಗಳಲ್ಲಿ ಅರ್ಧ ಭಾಗಕ್ಕಾಗಿ ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತೀರ್ಪಿನ ಪ್ರಕಾರ ನನ್ನ ತಂದೆಗೆ 30 ಗುಂಟೆ ಹಾಗೂ ಪ್ರತಿವಾದಿಗೆ 30 ಗುಂಟೆ ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಸದರಿ ತೀರ್ಪನ್ನು ಪ್ರಶ್ನಿಸಿ ನನ್ನ ತಂದೆ ಮತ್ತು ಅಣ್ಣರವರು RA No.40/1998 ರಂತೆ 2 ನೇ ಅಪರ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿ ದಿನಾಂಕ 07.09.2000 ರಂದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯು ಇದೇ ನ್ಯಾಯಾಲಯದಲ್ಲಿ ನನ್ನ ತಂದೆ ಹಾಗೂ ಅಣ್ಣನ ವಿರುದ್ಧ FDP No.2/2001 ರಂತೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದಲ್ಲಿ ದಿನಾಂಕ 29.09.2010 ರಂದು ಪ್ರತಿವಾದಿಗೆ 30 ಗುಂಟೆ ಜಮೀನನ್ನು ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಪ್ರತಿವಾದಿಯು ಜಾರಿ ಸಂ.21/2015 ರಂತೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದಲ್ಲಿ ನ್ಯಾಯಾಲಯದಿಂದ ನೇಮಕಗೊಂಡು ಸರ್ವೇಯರ್ ರವರು ಪ್ರತಿವಾದಿಗೆ ಸರ್ವೇ ನಂ.100 ರಲ್ಲಿ 30 ಗುಂಟೆ, ನನ್ನ ತಂದೆಗೆ ಸರ್ವೇ ನಂ.99/3 ರಲ್ಲಿ 30 ಗುಂಟೆಯನ್ನು ವಿಗಂಡಿಸಿದ್ದು, ಅದರಂತೆ ಜಾರಿ ಸಂಖ್ಯೆಯಲ್ಲಿ ತೀರ್ಮಾನವಾಗಿ ನ್ಯಾಯಾಲಯದ ಮುಖಾಂತರ ಸದರಿ ಆಸ್ತಿಯ ಸ್ವಾಧೀನಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗೆ ನ್ಯಾಯಾಲಯದಲ್ಲಿ ತೀರ್ಮಾನವಾದ ಹೊರತುಪಡಿಸಿ ನನ್ನ ತಂದೆಗೆ ಸರ್ವೇ ನಂ.99/3 ರಲ್ಲಿ ಬರೀ 30 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ.

ನಾನು ಈ ದಾವೆಯಲ್ಲಿ ಜಮೀನಿಗೆ ಸಂಬಂಧಿಸಿದಂತೆ ಪಟ್ಟಾ ಪುಸ್ತಕ, ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೇ ನಂ.99/3 ರಲ್ಲಿ 1 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದರಿ ಆಸ್ತಿಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಪ್ರಸ್ತುತ ಸದರಿ ಆಸ್ತಿಯ ಖಾತೆಯು ನನ್ನ ಅಣ್ಣ, ನನ್ನ ತಾಯಿ ಹಾಗೂ ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು 1 ಎಕರೆ 20 ಗುಂಟೆ ಪೂರ್ಣ ವಿಸ್ತೀರ್ಣಕ್ಕೆ ಮಾಡಿಸಿಕೊಂಡಿರುತ್ತೇವೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಸರ್ವೇ ನಂ.99/3 ರಲ್ಲಿ 1 ಎಕರೆ 10 ಗುಂಟೆ ಎಂದು ತೋರಿಸುತ್ತಿದ್ದು, ನಾನು 1 ಎಕರೆ 20 ಗುಂಟೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ನಿಪಿ-2 ದಾಖಲೆಯಡಿಯಲ್ಲಿ ಸರ್ವೇ ನಂ.99/3 ಮತ್ತು ಸರ್ವೇ ನಂ.100 ರಲ್ಲಿ ಒಟ್ಟಾಗಿ 1 ಎಕರೆ 20 ಗುಂಟೆ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಒಟ್ಟು ಕುಟುಂಬಕ್ಕೆ ಸೇರಿ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೇ ನಂ.99/3 ಮತ್ತು ಸರ್ವೇ ನಂ.100 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ತಂದೆ ತೀರಿಕೊಂಡ ನಂತರ ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ಆಸ್ತಿಗಳ ಸರ್ವೇ ಮಾಡಿಸಿರುತ್ತೇವೆ. ಸದರಿ ಸರ್ವೇ ಕಾರ್ಯ ಮಾಡಿಸಿ ಸುಮಾರು 4 ವರ್ಷಗಳಾಗಿರುತ್ತವೆ. ಸದರಿ ಸರ್ವೇ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ಸರ್ವೇ ಕಾರ್ಯ ಮಾಡಿಸಿರುವುದಿಲ್ಲ, ಆದಕಾರಣ ಯಾವುದೇ ಸರ್ವೇ ವರದಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-5 ಆಕಾರಬಂದ್ ನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿಯು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಂದೆಗೆ ಕೇವಲ 30 ಗುಂಟೆ ಆಸ್ತಿಗೆ ಹಕ್ಕು ಇದ್ದು, ನಾವು ತಪ್ಪು ಮಾಹಿತಿ ನೀಡಿ ನಿಪಿ-6 ರಂತೆ ಮುಟೇಷನ ಆದೇಶ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-7 ಪಹಣಿ ಪತ್ರಿಕೆ ಸಹ ತಪ್ಪು ಮಾಹಿತಿ ನೀಡಿ ತಪ್ಪಾಗಿ ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಖಾತೆ ಮಾಡಿಸಿಕೊಂಡಂತೆ 1 ಎಕರೆ 20 ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಹಾಗೂ ಬರೀ 30 ಗುಂಟೆ ಆಸ್ತಿಯ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

ಪಟ್ಟಾ ಪುಸ್ತಕದಲ್ಲಿ ತಿದ್ದುಪಡಿಯನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾರು ತಿದ್ದುಪಡಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು, ನನ್ನ ತಾಯಿ ಹಾಗೂ ಅಣ್ಣ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಯಲ್ಲಿ ಬೆಳೆಯನ್ನು ನನ್ನ ಅಣ್ಣ ಬೆಳೆಯುತ್ತಿದ್ದಾರೆ. ನನ್ನ ಅಣ್ಣ ಸರ್ವೇ ನಂ.99/3 ರ 30 ಗುಂಟೆ ವಿಸ್ತೀರ್ಣದಲ್ಲಿ

ಮಾತ್ರ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಗೂ ತಾಯಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸದರಿ ಜಮೀನು ಅಲ್ಲದೇ ನಮಗೆ ನಮ್ಮ ಊರಿನಲ್ಲಿ ಮನೆ ಸಹ ಇರುತ್ತದೆ. ಪ್ರತಿವಾದಿಯು ಜಾರಿ ಸಂ.21/2015 ರಲ್ಲಿನ ಆದೇಶದಂತೆ ಸದರಿ ಮನೆಯ ಅರ್ಧ ಭಾಗದ ಜಾಗದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮನೆಯನ್ನು ಭಾಗ ಮಾಡಿಕೊಡುವ ಸಮಯದಲ್ಲಿ ನನ್ನ ಅಣ್ಣ ಸಿದ್ದಯ್ಯರವರು ಹಾಜರಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ಶ್ರೀ **ಕೆ.ಎಸ್.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**